ಈ ಘಟನೆಗಳನ್ನೆಲ್ಲಾ ಚರ್ಚಿಸುತ್ತಿದ್ದಾಗ ರಾಮಕೃಷ್ಣ ಸಂಘದ ಹಿರಿಯ ಸಂನ್ಯಾಸಿಯಾಗಿರುವ ಸ್ವಾಮಿ ಅನನ್ಯಾನಂದಜೀಯವರ ಹತ್ತಿರ ಮಾತನಾಡುತ್ತಿದ್ದೆ. 'ನೀವು ಮಿಸ್ ಮೆಕ್‌ಲೌಡ್ ಮಾಡಿಸಿದ ನಾಣ್ಯವನ್ನು ನೋಡಿದ್ದೀರಾ?' ಎಂದು ಕೇಳಿದೆ. ಅವರು ಹೇಳಿದರು: 'ನನ್ನ ಹತ್ತಿರ ಆ ನಾಣ್ಯ ಇದೆ. ಮಿಸ್ ಮೆಕ್‌ಲೌಡ್ ನನಗೆ ಒಂದನ್ನು ಕೊಟ್ಟಿದ್ದಾರೆ.' ನಮ್ಮ ಗುರುಗಳಾದ ಸ್ವಾಮಿ ಯತೀಶ್ವರಾನಂದರು ೧೯೫೫ರಲ್ಲಿ ನನಗೆ ಮಂತ್ರೋಪದೇಶ ಮಾಡಿದ ಮೇಲೆ ಒಂದು ಜಪಮಾಲೆಯನ್ನು ತರಹೇಳಿದರು. ನಾನು ತಂದ ಜಪಮಾಲೆಯನ್ನು ತಾವು ಉಪಯೋಗಿಸಿ ಆಮೇಲೆ ಅದನ್ನು ನನ್ನ ಉಪಯೋಗಕ್ಕಾಗಿ ಕೊಟ್ಟರು. ಅದೇ ಸಮಯದಲ್ಲಿ ಅವರು ನನಗೆ ರಾಮಕೃಷ್ಣ-ವಿವೇಕಾನಂದರ ನಾಣ್ಯವನ್ನೂ ಕೊಟ್ಟರು—ಜಪಮಾಲೆಯ ಜೊತೆಗೇ ಇದನ್ನೂ ಇಟ್ಟುಕೋ ಎಂದರು. ಅದು ಈಗಲೂ ನನ್ನಲ್ಲಿದೆ. ಅದನ್ನು ಅನೇಕ ಮಿತ್ರರಿಗೆ ತೋರಿಸಿದ್ದೇನೆ. ಎಲ್ಲರೂ ಅದರ ಸೌಂದರ್ಯವನ್ನು ನೋಡಿ ಸಂತೋಷಪಡುತ್ತಾರೆ. ನಾಣ್ಯದ ಸಾವಿರಾರು ಪ್ರತಿಗಳು ಸಾವಿರಾರು ಜನರನ್ನು ಸೇರಿವೆ.

ಇದರಂತೆಯೇ ಅಕ್ಕಸಾಲಿಗ-ಕಲಾಕಾರ ಲಾಲಿಕ್‌ಗೆ ಹೇಳಿ ಗಾಜಿನ ಫಲಕದ ಮೇಲೆ ಸ್ವಾಮೀಜಿ ನಿಂತಿರುವ ಚಿತ್ರವನ್ನು ಮೂಡುವಂತೆ ತಯಾರಿಸಿದರು. ಇದನ್ನೂ ಅನೇಕ ಪ್ರತಿಗಳಾಗಿ ತಯಾರಿಸಿ ಜೋ ತಮ್ಮ ಗುರುತಿನವರಿಗೆಲ್ಲಾ ಹಂಚಿದರು. ಹೀಗೆ ಜೊಸೆಫಿನ್ ಮೆಕ್‌ಲೌಡ್ ಸ್ವಾಮಿ ವಿವೇಕಾನಂದರ ಸಂದೇಶ ಪ್ರಚಾರದಲ್ಲಿಯೇ ಸದಾ ತೊಡಗಿರುತ್ತಿದ್ದರು.

(ಮುಂದುವರೆಯುತ್ತದೆ)



# ವೈರಾಗ್ಯ

ಭಗವಂತನ ಸಾಕ್ಷಾತ್ಕಾರ ದೊರೆಯಬೇಕಾದರೆ ತೀವ್ರ ವೈರಾಗ್ಯ ಅತ್ಯಂತ ಆವಶ್ಯಕ. ಯಾವುವು ಭಗವಂತನ ಸಾಕ್ಷಾತ್ಕಾರಕ್ಕೆ ತಡೆಯಾಗಿ ತೋರಿ ಬರುವುವೊ ಅವನ್ನೆಲ್ಲ ಒಡನೆಯೇ ತ್ಯಾಗ ಮಾಡಿಬಿಡಬೇಕು. ಮುಂದೆ ನೋಡೋಣ ಅಂತ ಸುಮ್ಮನೆ ಕೈಕಟ್ಟಿ ಕುಳಿತಿರಬಾರದು. ಕಾಮ ಕಾಂಚನವೇ ಭಗವಂತನ ಸಾಕ್ಷಾತ್ಕಾರಕ್ಕೆ ಅಡ್ಡಲಾಗಿ ಬಿದ್ದಿರುವ ತಡೆ. ಮನಸ್ಸನ್ನು ಅವುಗಳ ಕಡೆಯಿಂದ ಎಳೆದುಕೊಂಡು ಬಿಡಬೇಕು.

ವೈರಾಗ್ಯದಲ್ಲಿ ಎರಡು ವಿಧ—ತೀವ್ರ, ಮಂದ. ಮಂದ ವೈರಾಗ್ಯ — ಆಗುತ್ತಾ ಇದೆ, ಆಗುತ್ತೆ ಅನ್ನುವ ಹಾಗೆ ; ಬಹಳ ನಿಧಾನವಾದ ತಾಳ. ತೀವ್ರ ವೈರಾಗ್ಯ—ಸಾಣೆ ಹಿಡಿಸಿದ ಕತ್ತಿಯ ಅಲಗಿನ ಹಾಗೆ ; ಮಾಯಾ ಪಾಶವನ್ನು 'ಕಚ್, ಕಚ್' ಅಂತ ಕತ್ತರಿಸಿಬಿಡುತ್ತದೆ.

ಭಗವಂತನ ಕೃಪೆಯಿಂದ ಸಾಧಕನಲ್ಲಿ ತೀವ್ರ ವೈರಾಗ್ಯ ಉಂಟಾದದ್ದೇ ಆದರೆ, ಆಗ ಆತ ಕಾಮಕಾಂಚನಾಸಕ್ತಿಗಳಿಂದ ಮುಕ್ತನಾಗಬಲ್ಲ. ಯಾವುದಕ್ಕೆ ತೀವ್ರ ವೈರಾಗ್ಯ ಅಂತ ಹೆಸರು? ಮಂದ ವೈರಾಗ್ಯವಿರುವವನು ಹೇಳುತ್ತಾನೆ : 'ಎಲ್ಲಾ ಸಕಾಲಕ್ಕೆ ನಿಧಾನವಾಗಿ ಬರಲಿ ; ಈಗ ಸದ್ಯ ನಾನು ಸುಮ್ಮನೆ ಭಗವಂತನ ನಾಮಜಪ ಮಾಡುತ್ತಿರುತ್ತೇನೆ.' ಆದರೆ ಯಾರಲ್ಲಿ ತೀವ್ರ ವೈರಾಗ್ಯ ಉಂಟಾಗಿದೆಯೋ ಆತ ಹೇಗೆ ತಾಯಿ ತನ್ನ ಮಗುವಿಗಾಗಿ ವ್ಯಾಕುಲಳಾಗಿರುತ್ತಾಳೋ ಹಾಗೆಯೇ ಭಗವಂತನಿಗಾಗಿ ಬಹಳ ವ್ಯಾಕುಲಪಡುತ್ತಿರುತ್ತಾನೆ. ತೀವ್ರ ವೈರಾಗ್ಯವುಳ್ಳವನಿಗೆ ಭಗವಂತನ ಹೊರತು ಇನ್ನು ಏನೂ ಬೇಕೆನಿಸುವುದಿಲ್ಲ.

ಒಬ್ಬ ರೈತ ಬಹಳ ದಿನಗಳಿಂದ ಕೆಲಸ ಮಾಡುತ್ತಿದ್ದಾನೆ. ಆದರೆ ಕೆರೆಯ ನೀರು ಮಾತ್ರ ಇನ್ನೂ ಆತನ ಗದ್ದೆಗೆ ಬಂದಿಲ್ಲ. ಆತನ ಮನಸ್ಸಿನಲ್ಲಿ ಪೌರುಷವಿಲ್ಲ. ಇನ್ನೊಬ್ಬ ಒಂದು ನಾಲ್ಕೈದು ದಿನ ಕೆಲಸ ಮಾಡಿದ ನಂತರ—'ಇಂದು ಗದ್ದೆಗೆ ನೀರು ತಂದ ಮೇಲೇನೆ ಕೆಲಸ ನಿಲ್ಲಿಸುವುದು' ಎಂದು ಪ್ರತಿಜ್ಞೆ ಮಾಡಿಕೊಳ್ಳುತ್ತಾನೆ. ಸ್ನಾನ ಊಟ ಇವುಗಳ ಭಾವನೆಯನ್ನೇ ಒಂದು ಮೂಲೆಗೆ ಕಟ್ಟಿಟ್ಟು ಬಿಡುತ್ತಾನೆ. ಇಡೀ ದಿನವೆಲ್ಲಾ ಕೆಲಸ ಮಾಡುತ್ತಾನೆ. ಸಾಯಂಕಾಲದ ಹೊತ್ತಿಗೆ ಯಾವಾಗ ನೀರು ಆತನ ಗದ್ದೆಗೆ 'ಕಲ ಕಲ' ಅಂತ ಬರಲಾರಂಭಿಸುತ್ತದೋ ಆಗ ಆತನಿಗೆ ಬಹಳ ಆನಂದವಾಗಿಬಿಡುತ್ತದೆ. ಅನಂತರ ಮನೆಗೆ ಹೋಗಿ ಹೆಂಡತಿಯನ್ನು ಕರೆದು ಹೇಳಿದ: 'ಈಗ ಎಣ್ಣೆ ತಂದುಕೊಡು; ಗುಡುಗುಡಿ ಸಿದ್ಧಪಡಿಸು.' ನಿಶ್ಚಿಂತೆಯಿಂದ ಸ್ನಾನ, ಊಟ ಮುಗಿಸಿ ಮಲಗಿಕೊಂಡು ಮನೆಸೂರು ಕಿತ್ತುಹೋಗುವ ಹಾಗೆ ಗೊರಕೆ ಹೊಡೆಯಲಾರಂಭಿಸಿದ. ಈ ವಿಧದ ದೃಢ ಸಂಕಲ್ಪವೇ ತೀವ್ರ ವೈರಾಗ್ಯದ ಉಪಮೆ.

ಒಳ್ಳೆ ದೃಢ ಸಂಕಲ್ಪವಿಲ್ಲದಿದ್ದರೆ ಯಾವ ರೀತಿಯಾಗಿ ರೈತ ತನ್ನ ಜಮೀನಿಗೆ ನೀರು ತರಲಾರನೊ ಹಾಗೆಯೇ ತೀವ್ರ ವೈರಾಗ್ಯವಿಲ್ಲದಿದ್ದರೆ ಮನುಷ್ಯ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಲಾರ.

ಒಬ್ಬನ ಹೆಂಡತಿ ತನ್ನ ಪತಿಗೆ ಹೇಳಿದಳು : 'ನೋಡಿ, ಆ ಮನೆಯವರಿಗೆ ದೊಡ್ಡ ವೈರಾಗ್ಯ ಬಂದುಬಿಟ್ಟಿದೆ—ಆದರೆ ನಿಮ್ಮಲ್ಲಿ ಅಂಥದೇನು ಎಳ್ಳಷ್ಟೂ ಕಾಣುತ್ತಿಲ್ಲ. ಅವರಿಗೆ ಹದಿನಾರು ಜನ ಹೆಂಡತಿಯರಿದ್ದಾರೆ. ಒಬ್ಬೊಬ್ಬಳನ್ನಾಗಿ ತ್ಯಾಗ ಮಾಡುತ್ತಿದ್ದಾರೆ.' ಆಗ ಆಕೆಯ ಪತಿ ಸ್ನಾನಕ್ಕೆ ಹೊರಟಿದ್ದ. ಹೆಗಲ ಮೇಲೆ ಚೌಕ ಇತ್ತು. ಹೇಳಿದ : 'ಎಲೇ ಹುಚ್ಚಿ! ಆತನ ಕೈಯಲ್ಲಿ ತ್ಯಾಗ ಮಾಡಲು ಸಾಧ್ಯವಾಗುವುದಿಲ್ಲ. ತ್ಯಾಗದಲ್ಲಿ ಕಿಂಚಿತ್ ಕಿಂಚಿತ್ ಎಂಬುದು ಉಂಟೆ? ನನ್ನ ಕೈಯಲ್ಲಿ ಸಾಧ್ಯ. ಇದೋ ನೋಡು! ಹೊರಟೆ ನಾನು.' ಆತ ಮನೆ ವ್ಯವಸ್ಥೆಯ ಸಂಬಂಧವಾಗಿ ಸ್ವಲ್ಪವೂ ಯೋಚಿಸದೆ, ಅದೇ ಅವಸ್ಥೆಯಲ್ಲಿ ಎಂದರೆ ಹೆಗಲ ಮೇಲೆ ಚೌಕ ಹಾಕಿಕೊಂಡಿದ್ದ ಹಾಗೇ ಮನೆ ಬಿಟ್ಟು ಹೊರಟೇ ಹೋದ. ಇದಕ್ಕೆ ತೀವ್ರ ವೈರಾಗ್ಯ ಅಂತ ಹೆಸರು.

ಇನ್ನೊಂದು ವಿಧದ ವೈರಾಗ್ಯವಿದೆ. ಅದಕ್ಕೆ ಮರ್ಕಟ ವೈರಾಗ್ಯ ಅಂತ ಹೆಸರು. ಒಬ್ಬ ಸಂಸಾರದ ಬೇಗೆಯನ್ನು ತಡೆಯಲಾರದೆ ಕಾಷಾಯವಸ್ತ್ರ ಧರಿಸಿ ಕಾಶಿಗೆ ಹೋದ. ಬಹಳ ದಿನಗಳವರೆಗೆ ಆತನ ಸುದ್ದಿ ಸಮಾಚಾರವೇ ಗೊತ್ತಾಗಲಿಲ್ಲ. ಅನಂತರ ಮನೆಗೆ ಒಂದು ಪತ್ರ ಬಂತು. ಅದರಲ್ಲಿ ಬರೆದಿತ್ತು, 'ನೀವು ಚಿಂತಿಸಬೇಕಾಗಿಲ್ಲ. ನನಗೊಂದು ಕೆಲಸ ಸಿಕ್ಕಿದೆ' ಎಂದು.

ಶ್ರೀರಾಮಕೃಷ್ಣ ವಚನವೇದದಿಂದ